ಪ್ರಾಸಾ-8 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ

ದಿಃ 13.03.2026

ಪಾಟೀ ಸವಾಲು ಆರೋಪಿ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ

3. ಕಳೆದ ಬಾರಿ ನಾನು ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಏಕೆಂದರೆ ನಾನು ಜೈಲಿನಲ್ಲಿ ಇದ್ದೇನು ಅದಕ್ಕಾಗಿ ನಾನು ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ನನ್ನ ಮಾವ ಹಾಗೂ ನನ್ನ ಅತ್ತೆಯ ಮೇಲೆ ಆಸ್ತಿಯ ಸಂಬಂಧ ನಾನು ಹೊಡೆದಿದ್ದರಿಂದ ನಾನು ಜೈಲಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ನಿ.ಪಿ.43 ಹಾಗೂ 44 ರಲ್ಲಿ ಇರುವ ಸಹಿ ಬೇರೆ ಬೇರೆ ಆಗಿರುತ್ತದೆ ನನ್ನದ್ದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಮನೆ ನಂಬರ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಭಾವಚಿತ್ರ ತೆಗೆದ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿಯಲ್ಲ, ಕರಡು ನಕಾಶೆಯನ್ನು ತೆಗೆದ ಬಗ್ಗೆ ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾರ ಹತ್ತಿರಿವು ಡ್ರೈವರ ಆಗಿ ಕೆಲಸ ಮಾಡುವುದಿಲ್ಲ ಆದರೆ ನನ್ನದೆ ಟ್ರ್ಯಾಕ್ಟರ ಇರುತ್ತದೆ. ನಾನು ನನ್ನ ಟ್ರ್ಯಾಕ್ಟರ ಬಾಡಿಗೆ ಹೊಡೆಯುತ್ತೇನೆ. ಬೆಳಿಗ್ಗೆ 9.00 ಗಂಟೆಗೆ ಹೊದರೆ ಸಂಜೆ 6.00 ಗಂಟೆಗೆ ಬರುತ್ತೇನೆ. ಆ ದಿನ ಗುರುಮಠಕಲ್‌ಗೆ ಏಕೆ ಹೋಗಿರುತ್ತೇನೆ ಎಂದು ಪೊಲಿಸರಿಗೆ ನಾನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಈ ರೀತಿ ಬರೆಯಿರಿ ಎಂದು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ಅವರು ಬರೆದ ಮೇಲೆ ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಪಂಚನಾಮೆಯನ್ನು ಬರೆದು ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

4. ದಿಃ 09.10.2024 ರಂದು ಗುರುಮಠಕಲ್ ಪೊಲೀಸ ಠಾಣೆಗೆ ಮಧ್ಯಾಹ್ನ 12.30 ಗಂಟೆಗೆ ಪಂಚನಾಮೆಗೆ ನನ್ನನ್ನು ಕರೆಸಿದ್ದರು ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ತನ್ನ ಜೊತೆ ಬಂದರೆ ಕೊಲೆ ಮಾಡಿದ ಸ್ಥಳ ಮತ್ತು ತಾನು ಧರಿಸಿದಂತಹ ಬಟ್ಟೆಗಳನ್ನು ತೋರಿಸುವುದಾಗಿ ತಿಳಿಸಿರುತ್ತಾನೆ ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ಚಾಸಾ-13 ಹಾಗೂ ಆರೋಪಿ ಮತ್ತು ಪೊಲೀಸರು ಪೊಲೀಸ ಜೀಪಿನಲ್ಲಿ ಕಾಕಲವಾರ ಗ್ರಾಮಕ್ಕೆ ಚಾಸಾ-27 ರವರ ಮನೆಗೆ ಕರೆದುಕೊಂಡು ಹೋದಾಗ ಮಧ್ಯಾಹ್ನ 1.30 ಗಂಟೆ ಆಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನ ಅದೇ ಕಾಲಕ್ಕೆ ತೆಗೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಭಾವಚಿತ್ರಗಳನ್ನು ತೆಗೆದ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಬಟ್ಟ್ರೆಗಳನ್ನು ಎಲ್ಲಿಂದ ತಂದು ಹಾಜರುಪಡಿಸಿದ ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಮನೆಯ ಒಳಗಡೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮನೆಯ ಒಳಗಡೆ ಹೋದ ಬಗ್ಗೆ ಆತ ಬಟ್ಟೆಗಳನ್ನು ತಂದು ಹಾಜರುಪಡಿಸಿದ ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಅಂಗಿ, ಪ್ಯಾಂಟ್ ಹಾಗೂ ಅಂಡರವೇರ ಅವುಗಳನ್ನು ಬಟ್ಟೆಯಲ್ಲಿ ಸೀಲ ಮಾಡಿದರು ಎಂದು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಸೀಲ್ ಮಾಡಿದ ಬಗ್ಗೆ ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.6 ರಿಂದ 8 ಅವುಗಳಿಗೆ ಸೀಲ್ ಇರುವುದಿಲ್ಲ ಎಂದರೆ ಸರಿಯಲ್ಲ. ಎಂತಹ ಸೀಲನ ನಮೂನೆ ಹಾಕಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಭಾವಚಿತ್ರಗಳನ್ನು ನಿ.ಪಿ.45 ರಿಂದ 52, 54 ರಿಂದ 58 ತೆಗೆದ ಬಗ್ಗೆ ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಡಿವಾಳ ಜನಾಂಗದವರು ಆಗಿರುತ್ತೇವೆ. ನನಗೆ ಓದಲು ಬರೆಯಲು ಬರುವುದಿಲ್ಲ.

ಆದರಿಂದ ಪಂಚನಾಮೆಯಲ್ಲಿ ಏನು ಬರೆದಿರುತ್ತದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎನ್ನುವುದಕ್ಕೆ ಸಾಕ್ಷಿದಾರರು ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತನ ಮನೆಯಲ್ಲಿ ಎಷ್ಟು ಜನರು ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ.

5. ನನ್ನನ್ನು ಹಾಗೂ ಚಾಸಾ-15 ರವರನ್ನು ಗುರುಮಠಕಲ್ ಪೊಲೀಸ ಠಾಣೆಗೆ ದಿಃ 09.10.2024 ರಂದು ಗುರುಮಠಕಲ ಪೊಲೀಸ ಠಾಣೆಯಲ್ಲಿ ಮಧ್ಯಾಹ್ನ 12.30 ಗಂಟೆಗೆ ಕರೆಯಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ವಿಚಾರ ಮಾಡಲಾಗಿ ತಾನು ನರೇಂದ್ರ ಎನ್ನುವ ಬಾಲಕನನ್ನು ಕೊಲೆ ಮಾಡಿದ ಸ್ಥಳ, ಕೊಲೆ ಮಾಡುವ ಸಮಯದಲ್ಲಿ ತಾನು ಧರಿಸಿದಂತಹ ಬಟ್ಟೆಗಳನ್ನು ತೋರಿಸುವುದಗಿ ಹೇಳಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನ, ಚಾಸಾ-15 ಹಾಗೂ ಆರೋಪಿ ಮತ್ತು ಪೊಲೀಸರು ಪೊಲೀಸ ಜಿಪಿನಲ್ಲಿ ಕಾಕಲವಾರ ಗ್ರಾಮಕ್ಕೆ ಚಾಸಾ-27 ಸದಾಶಿವರೆಡ್ಡಿ ಇವರ ಮನೆಗೆ ಕರೆದುಕೊಂಡು ಹೋದಾಗ ಮಧ್ಯಾಹ್ನ 1.30 ಗಂಟೆ ಆಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ಕೊಲೆ ಮಾಡಿದ ಸ್ಥಳವೆಂದು ತೋರಿಸಿದ್ದು ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದು ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ ಎಂದು ಆ ಕಾಲಕ್ಕೆ ಕರಡು ನಕಾಶೆಯನ್ನು ತಯಾರಿಸುತ್ತಾರೆ ಮತ್ತು ಆ ಕಾಲಕ್ಕೆ 8 ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಾನು ಕೊಲೆ ಮಾಡಿದ ಸಮಯದಲ್ಲಿ ಧರಿಸಿದಂತಹ ಬಟ್ಟೆಗಳನ್ನು ತನ್ನ ಮನೆಯಲ್ಲಿ ಇಟ್ಟಿದಾಗಿ ಹೇಳಿದ್ದು, ಅದರಂತೆ ನಮ್ಮನ್ನು ಆರೋಪಿತನ ಮನೆಗೆ ಕರೆದುಕೊಯಿ ಹೋಗಿದು ಆರೋಪಿ ತನ್ನ ಮನೆಯ ಪಡಸಾಲೆಯಲ್ಲಿ ಬಟ್ಟೆಗಳನ್ನು ಹಾಜರುಪಡಿಸಿದನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಅವುಗಳನ್ನು ಸೀಲ ಮಾಡಿ ಜಪ್ತಿಮಾಡಿಕೊಂಡು ಆ ಕಾಲಕ್ಕೆ ಭಾವಚಿತ್ರ್ನಳನ್ನು ತೆಗೆದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಎ ಂದರೆ ಸರಿಯಲ್ಲ. ನನ್ನ ಸಮಕ್ಷಮಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಗುರುಮಠಕಲನಿಂದ ಕಾಕಲವಾರ ಸುಮಾರು 5 ಕಿಲೋ ಮೀಟರ ಇರುತ್ತದೆ. ಅಂದಾಜು 20 ಕೇಸುಗಳಲ್ಲಿ ಪಂಚ ಆಗಿ ಸಹಿ ಹಾಕಿದೀರಾ ಎನ್ನುವುದಕ್ಕೆ ಸಾಕ್ಷಿದಾರರು 2 ಕೇಸುಗಳಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.